# ಪ್ರಕಟಣೆ

2020-21ನೇ ಸಾಲಿನ ಬಿ.ಇಡಿ ಕೋರ್ಸಿನ ವ್ಯಾಸಂಗಕ್ಕಾಗಿ ಸರ್ಕಾರಿ ಕೋಟಾದಡಿ ಲಭ್ಯವಿರುವ ಸೀಟುಗಳ ದಾಖಲಾತಿಗೆ ಸಂಬಂಧಿಸಿದಂತೆ ವಿಜ್ಞಾನ ವಿಭಾಗದ ಅಭ್ಯರ್ಥಿಗಳಿಗೆ ಮೂರನೆಯ ಸುತ್ತಿನ ಸೀಟು ಹಂಚಿಕೆ ಪಟ್ಟಿಯನ್ನು ದಿ:09-04-2021 ರಂದು ವೆಬ್ ಸೈಟ್ ನಲ್ಲಿ ಪ್ರಕಟಿಸಿ, ಅಭ್ಯರ್ಥಿಗಳ ದಾಖಲಾತಿಗಾಗಿ ದಿನಾಂಕ: 16-04-2021 ರವರೆಗೆ ಕಾಲಾವಕಾಶ ನೀಡಲಾಗಿತ್ತು.

ಸದರಿ ಪಟ್ಟಿಯಲ್ಲಿನ ಅಭ್ಯರ್ಥಿಗಳಿಗೆ ದಾಖಲಾತಿ ಪ್ರಕ್ರಿಯೆ ಪೂರ್ಣಗೊಂಡಿದ್ದು, ಅಭ್ಯರ್ಥಿಗಳು ದಾಖಲಾದ ಬಗ್ಗೆ ವಿವರಗಳನ್ನು ಪರಿಶೀಲನಾ ಕೇಂದ್ರಗಳು ಹಾಗೂ ಬಿ.ಇಡಿ ಕಾಲೇಜುಗಳಿಂದ ಸಲ್ಲಿಕೆಯಾದ ದಾಖಲಾತಿ ವಿವರಗಳನ್ನಾಧರಿಸಿ ವಿಜ್ಞಾನ ವಿಭಾಗಕ್ಕೆ (ಕೊನೆಯ ಸುತ್ತು) ಹಾಗೂ ಕಲಾ ವಿಭಾಗದ ಅಭ್ಯರ್ಥಿಗಳಿಗೆ ಲಭ್ಯವಿರುವ ಸೀಟುಗಳಿಗೆ [Institution wise remaining seats ( category wise)] Seat Matrix ಅನ್ನು ದಿನಾಂಕ:16-04-2021 ರಂದು ಪ್ರಕಟಿಸಿ, ಕಾಲೇಜುಗಳಿಗೆ ಆಯ್ಕೆಗಳನ್ನು (Option Entry) ದಾಖಲಿಸಲು ದಿನಾಂಕ: 18-04-2021ರ ಮಧ್ಯರಾತ್ರಿ 11.50 **P.M** ಗಂಟೆಯವರೆಗೆ ಅವಕಾಶ ಕಲ್ಪಿಸಲಾಗಿತ್ತು.

ಈ ರೀತಿ, ವಿಜ್ಞಾನ ಹಾಗೂ ಕಲಾ ವಿಭಾಗದ ಅಭ್ಯರ್ಥಿಗಳು ಕಾಲೇಜುಗಳ ಆಯ್ಕೆಗಳನ್ನು ದಾಖಲಿಸಿರುವುದನ್ನು ಪರಿಗಣಿಸಿ ಮೆರಿಟ್ ಹಾಗೂ ರೋಸ್ಟರ್ ಅನ್ವಯ ಸೀಟು ಹಂಚಿಕೆ ಪಟ್ಟಿಯನ್ನು ದಿನಾಂಕ: 19-04-2021 ರಂದು ಇಲಾಖಾ ವೆಬ್ ಸೈಟ್ ನಲ್ಲಿ ಪ್ರಕಟಿಸಿದೆ. ಅಭ್ಯರ್ಥಿಗಳು ಹಂಚಿಕೆಯಾದ ಕಾಲೇಜಿಗೆ ನಿಯಮಾನುಸಾರ ನಿಗದಿತ ದಾಖಲಾತಿ ಶುಲ್ಕವನ್ನು ತಮ್ಮ **Username** ಮತ್ತು **Password** ಅನ್ನು ನಮೂದಿಸುವುದರೊಂದಿಗೆ **Login** ಆಗಿ ಆನ್ ಲೈನ್ ಮೂಲಕ (ನೆಟ್ ಬ್ಯಾಂಕಿಂಗ್, ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್ ಹಾಗೂ ಯು.ಪಿ.ಐ) ಪಾವತಿಸುವುದು. ಶುಲ್ಕ ಪಾವತಿಸಿದ ನಂತರವೇ ದಾಖಲಾತಿ ಪತ್ರ **Generate** ಆಗುವುದರಿಂದ ಶುಲ್ಕ ಪಾವತಿಸಿದ ನಂತರವೇ ಪರಿಶೀಲನಾ ಕೇಂದ್ರಕ್ಕೆ ತೆರಳುವುದು. ಪರಿಶೀಲನಾ ಕೇಂದ್ರದ ಮೂಲಕ ಕಾಲೇಜಿಗೆ ದಾಖಲಾಗಲು ದಿನಾಂಕ: 20-04-2021 ರಿಂದ 22-04-2021 ರವರೆಗೆ (ಅಭ್ಯರ್ಥಿಗಳು ದಾಖಲಾತಿ ಶುಲ್ಕವನ್ನು ದಿನಾಂಕ: 19-04-2021ರಿಂದಲೇ ಪಾವತಿಸಬಹುದು) ಅವಕಾಶ ಕಲ್ಪಿಸಲಾಗಿದೆ.

ಅಭ್ಯರ್ಥಿಯು ದಾಖಲಾತಿ ಶುಲ್ಕ ಪಾವತಿಸಿದ ನಂತರ ತಮಗೆ ಅನ್ವಯ ವಾಗುವ ಮೂಲ ದಾಖಲೆಗಳನ್ನು ಅನುಬಂಧ-6ರ ನಮೂನೆಯಲ್ಲಿರುವಂತೆ ಕ್ರಮವಾಗಿ ಜೋಡಿಸಿಕೊಂಡು ಸಂಬಂಧಪಟ್ಟ ಜಿಲ್ಲಾ ನೋಡಲ್ ಕೇಂದ್ರಗಳಿಗೆ ಹಾಜರಾಗುವುದು. ನೋಡಲ್ ಕೇಂದ್ರದಲ್ಲಿ ಅಧಿಕಾರಿಗಳು ಅಭ್ಯರ್ಥಿಯು ನಿಯಮಾನುಸಾರ ಶುಲ್ಕ ಪಾವತಿಸಿರುವ ಬಗ್ಗೆ ಹಾಗೂ ಮೂಲ ದಾಖಲೆಗಳನ್ನು ಹೊಂದಿರುವ ಬಗ್ಗೆ ಖಾತ್ರಿ ಪಡಿಸಿಕೊಂಡು ದಾಖಲಾತಿ ಪತ್ರವನ್ನು ವಿತರಿಸುವರು.

ಸೂಚನೆ:

1. ನಿಗದಿತ ದಿನಾಂಕದೊಳಗೆ ಶುಲ್ಕ ಪಾವತಿಸದ ಹಾಗೂ ಪಾವತಿಸಿ ನೋಡಲ್ ಕೇಂದ್ರದ ಮೂಲಕ ಕಾಲೇಜಿಗೆ ದಾಖಲು ಮಾಡಿಕೊಳ್ಳದೇ ಇರುವ ಅಭ್ಯರ್ಥಿಗಳ ಸೀಟು ರದ್ದಾಗುವುದು.

2. ವಿಜ್ಞಾನ ವಿಭಾಗದ ಅಭ್ಯರ್ಥಿಗಳ ದಾಖಲಾತಿಗೆ ಇದು ಕೊನೆಯ ಸುತ್ತಾಗಿರುತ್ತದೆ, ಕೊನೆಯ ದಿನಾಂಕದ ನಂತರ ದಾಖಲಾತಿಗೆ ಅವಕಾಶವಿರುವುದಿಲ್ಲ.

3. ಕಲಾ ವಿಭಾಗದ ಅಭ್ಯರ್ಥಿಗಳು: ಇಲ್ಲಿಯವರೆಗೆ ಸೀಟು ಹಂಚಿಕೆಯಾಗದೆ ಪ್ರಥಮ ಬಾರಿಗೆ ಮೂರನೇ ಸುತ್ತಿನಲ್ಲಿ ಸೀಟು ಹಂಚಿಕೆಯಾಗಿರುವ ಕಲಾ ವಿಭಾಗದ ಅಭ್ಯರ್ಥಿಗಳು ಪ್ರವೇಶ ಬಯಸಿದಲ್ಲಿ ಸಂಬಂಧಿಸಿದ ಸಂಸ್ಥೆಗೆ ದಾಖಲಾಗುವುದು. ಒಂದು ವೇಳೆ ಮುಂದಿನ ಸುತ್ತಿಗೆ ಹೋಗಲು ಬಯಸಿದಲ್ಲಿ ಕಡ್ಡಾಯವಾಗಿ ತಮ್ಮ ಲಾಗಿನ್‌ನಲ್ಲಿ **ಮುಂದಿನ ಸುತ್ತಿನ ಸೀಟು ಹಂಚಿಕೆಗೆ ಆಯ್ಕೆ ಬಯಸುವಿರಾ (Would you like to opt for next round seat allotment)** ಎಂಬ ಅಂಕಣದಲ್ಲಿ **YES** ಎಂದು ನಮೂದಿಸಿದಲ್ಲಿ ಮಾತ್ರ ಅಂತಹ ಅಭ್ಯರ್ಥಿಗಳಿಗೆ ಮತ್ತೊಂದು ಅವಕಾಶ ನೀಡಲಾಗುವುದು. (ಅಭ್ಯರ್ಥಿಯು ಮುಂದಿನ ಸುತ್ತಿಗೆ ಹೋಗಲು **YES** ಎಂದು ಆನ್ ಲೈನ್ ನಮೂನೆಯಲ್ಲಿ ನಮೂದಿಸಿದ ಕೂಡಲೇ ಈಗ ಹಂಚಿಕೆಯಾಗಿರುವ ಕಾಲೇಜನ್ನು ಕಾಯ್ದಿರಿಸಲಾಗುವುದಿಲ್ಲ) ಉಳಿದ ಅಭ್ಯರ್ಥಿಗಳಿಗೆ ಅಂದರೆ ಮುಂದಿನ

ಸುತ್ತಿಗೆ ಆಯ್ಕೆ ಬಯಸುವ ಬಗ್ಗೆ ಹೌದು ಎಂದು ನಮೂದಿಸದೆ ಇರುವ ಅಭ್ಯರ್ಥಿಗಳನ್ನು 4ನೇ ಸುತ್ತಿಗೆ ಪರಿಗಣಿಸುವುದಿಲ್ಲ. ಆದ್ದರಿಂದ ಕಲಾ ವಿಭಾಗದ ಅಭ್ಯರ್ಥಿಗಳು ಜಾಗರೂಕತೆಯಿಂದ ವ್ಯವಹರಿಸಲು ಸೂಚಿಸಿದೆ. ನಮಗೆ ಗೊತ್ತಿಲ್ಲ ಆದ್ದರಿಂದ ನಾವು ನಮೂದಿಸಿಲ್ಲ ಅನ್ನುವ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದಿಲ್ಲ. ಇದರಿಂದಾಗುವ ಆಗುಹೋಗುಗಳಿಗೆ ಸಂಬಂಧಿಸಿದ ಅಭ್ಯರ್ಥಿಗಳೇ ನೇರ ಹೊಣೆಗಾರರಾಗುತ್ತಾರೆ.

4. ಪ.ಜಾತಿ/ ಪ.ಪಂಗಡ ಕ್ಕೆ ಸೇರಿದ ಅಭ್ಯರ್ಥಿಗಳು ಶುಲ್ಕ ವಿನಾಯಿತಿ ಪಡೆಯಲು ಸಕ್ಷಮ ಪ್ರಾಧಿಕಾರದಿಂದ ಪಡೆದ ಆದಾಯ ಪ್ರಮಾಣ ಪತ್ರದಲ್ಲಿ ರೂ. **2,50,000/-** ರ ಒಳಗಿನ ಆದಾಯ ಮಿತಿಯನ್ನು ಹೊಂದಿರಬೇಕು (ಪ್ರಮಾಣ ಪತ್ರವು ಚಾಲ್ತಿಯಲ್ಲಿರಬೇಕು). ದಾಖಲಾತಿ ಪತ್ರ ಪಡೆಯುವ ಸಂದರ್ಭದಲ್ಲಿ ನೋಡಲ್ ಅಧಿಕಾರಿಗೆ ದಾಖಲಾತಿಗೆ ಸಂಬಂಧಪಟ್ಟ ಮೂಲ ದಾಖಲೆಗಳೊಂದಿಗೆ ಈ ಪ್ರಮಾಣ ಪತ್ರವನ್ನು ಒದಗಿಸುವುದು ಕಡ್ಡಾಯ. ಒಂದು ವೇಳೆ ಆದಾಯ ಮೀತಿ ರೂ. **2,50.000/-**ಗಳಿಗಿಂತ ಅಧಿಕವಿರುವ ಅಭ್ಯರ್ಥಿಗಳು ನಿಗದಿತ ಶುಲ್ಕವನ್ನು ಪಾವತಿಸುವುದು ಕಡ್ಡಾಯ.

ಸಹಿ/-
ವಿಶೇಷಾಧಿಕಾರಿ
ಕೇಂದ್ರೀಕೃತ ದಾಖಲಾತಿ ಘಟಕ